# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 369

ಸದಸ್ಯರ ಹೆಸರು : ಶ್ರೀ ಎನ್. ಎಸ್. ಬೋಸ್‌ರಾಜು

(ವಿಧಾನಸಭೆಯಿಂದ ಚುನಾಯಿತರಾದರವರು)

ಉತ್ತರಿಸುವ ಸಚಿವರು : ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 19.08.2026

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಯಚೂರು ನಗರದಲ್ಲಿ ನಗರ ಸಾರಿಗೆ ಸಂಕೀರ್ಣ ಕಟ್ಟಡ ನಿರ್ಮಾಣ ಕಾಮಗಾರಿ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಕಾಮಗಾರಿಗೆ ಯಾವ ವರ್ಷದಲ್ಲಿ ಅನುಮೋದನೆ ನೀಡಲಾಗಿದೆ; ಮತ್ತು ಕಾಮಗಾರಿಯನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು; (ಮಾಹಿತಿ ಒದಗಿಸುವುದು) | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ರಾಯಚೂರು ನಗರ ಸಾರಿಗೆ ಬಸ್ ನಿಲ್ದಾಣವನ್ನು ಪ್ರಯಾಣಿಕರ ಸೌಕರ್ಯ ಕೇಂದ್ರದೊಂದಿಗೆ ಅಂದಾಜು ರೂ.18.00 (ತೆರಿಗೆ ಸೇರಿ) ಕೋಟಿಗಳಲ್ಲಿ ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಗೆ 2019-20ನೇ ಸಾಲಿನಲ್ಲಿ ಅನುಮೋದನೆ ನೀಡಲಾಗಿದ್ದು, ಕಾಮಗಾರಿಯನ್ನು ದಿನಾಂಕ:27.10.2020ರಂದು ಪ್ರಾರಂಭಿಸಲಾಗಿತ್ತು, ಕೋವಿಡ್-19ರ ಹಿನ್ನಲೆಯಲ್ಲಿ ಕಾಮಗಾರಿ ಕೆಲಸವನ್ನು ಸ್ಥಗಿತಗೊಳಿಸಲಾಗಿತ್ತು.<br><br>ಕ್ಯೂರೇಟರ್‌ರವರ ಕಛೇರಿ, ಸರ್ಕಾರಿ ವಸ್ತು ಸಂಗ್ರಹಾಲಯ, ನವರಂಗ ದರವಾಜ, ರಾಯಚೂರು ಇವರು ರಾಯಚೂರು ನಗರದ ರಾಜ್ಯ ಸಂರಕ್ಷಿತ ನಗರದ ಕೋಟೆ ಬಾಗಿಲು, ಮೇಕ್ಕಾ ದರ್ವಾಜಾ ಸ್ಮಾರಕ ಹತ್ತಿರ, ಸ್ಮಾರಕದ 100.00 ಮೀಟರ್ ಅಂತರದ ನಿಷೇಧಿತ ಪ್ರದೇಶದಲ್ಲಿ ಪೂರ್ವಾನುಮತಿ ಪಡೆಯದೇ ಕೆಲಸವನ್ನು ನಿರ್ವಹಿಸುವುದು ಕಾಯ್ದೆಯ ಉಲ್ಲಂಘನೆ/ಕಾನೂನು ಅಡಿಯಲ್ಲಿ ಅಪರಾಧವಾಗಿರುತ್ತದೆ ಎಂದು ತಿಳಿಸಿ, ಸದರಿ ಕಾಮಗಾರಿಯನ್ನು ತಕ್ಷಣವೇ ನಿಲ್ಲಿಸಬೇಕೆಂದು ಹಾಗೂ ಪೂರ್ವಾನುಮತಿಯನ್ನು ಪಡೆಯಬೇಕೆಂದು ನೋಟಿಸ್ ನೀಡಿದ್ದರಿಂದ ಕಾಮಗಾರಿಯು ವಿಳಂಭವಾಗಿರುತ್ತದೆ.<br><br>ಪ್ರಸ್ತುತ, ಮಂಜೂರಾದ ಕಾಮಗಾರಿಯಲ್ಲಿ ನೆಲಮಹಡಿ, ನೆಲ ಅಂತಸ್ತು ಹಾಗೂ ಮೊದಲನೇ ಅಂತಸ್ತಿನ ಮೇಲ್ಛಾವಣಿ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ನೆಲ ಅಂತಸ್ತಿನ ಕೋಣೆಗಳಿಗೆ ಗೋಡೆ ನಿರ್ಮಾಣ ಹಾಗೂ ನೆಲಹಾಸು ಕಾಮಗಾರಿ ಕೆಲಸವು ಪ್ರಗತಿಯಲ್ಲಿರುತ್ತದೆ.<br><br>ಸದರಿ ಕಾಮಗಾರಿಗೆ 2024-25ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆ, ಬಂಡವಾಳ ವೆಚ್ಚ ಹಾಗೂ ನಗರ ಭೂ ಸಾರಿಗೆ ನಿರ್ದೇಶನಾಲಯದ (ಡಲ್ಟ್) ಯೋಜನೆಗಳಿಂದ ಒಟ್ಟು ರೂ.11.20 ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.<br><br>2025-26 ಹಾಗೂ 2026-27ನೇ ಸಾಲಿನಲ್ಲಿ ಯಾವುದೇ |
| ಆ. | ಯಾವ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | |

| | | |
|---|---|---|
| | | ಅನುದಾನ ಮಂಜೂರಾತಿ/ಬಿಡುಗಡೆಯಾಗಿರುವುದಿಲ್ಲ. ಬಾಕಿ ರೂ.6.00 ಕೋಟಿ ಅನುದಾನದ ಅವಶ್ಯಕತೆಯಿದ್ದು, ಅನುದಾನದ ಲಭ್ಯತೆಯನುಸಾರವಾಗಿ ಉಳಿದ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 220 ಟಿಸಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು